**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಚಾಮರಾಜನಗರ**

**ಓ.ಎಸ್. ನಂ. 68/2018**

**ವಾದಿ** : ಶ್ರೀ ಗೌತಮ್. ಎಸ್ ಮತ್ತು ಇನ್ನೊಬ್ಬರು

V/S

**ಪ್ರತಿವಾದಿ** : ಶ್ರೀ ಎಲ್. ಸುದೇಶ್ ಮತ್ತು ಇನ್ನೊಬ್ಬರು

## ವಿವಾದಾಂಶಗಳು

1. ವಾದಿಯರು ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಿದ್ದು ತಾವು ಮತ್ತು 1 ನೇ ಪ್ರತಿವಾದಿ ಒಟ್ಟು ಕುಟುಂಬದ ಸದಸ್ಯರಿದ್ದು, ದಾವಾ ಸ್ವತ್ತುಗಳು ವಾದಿ, ಪ್ರತಿವಾದಿಯರ ಜಂಟಿ ಸ್ವಾಧೀನಾನುಭವದಲ್ಲಿದೆ ಎಂದು ರುಜುವಾತುಪಡಿಸುತ್ತಾರೆಯೇ?

2. 1 ನೇ ಪ್ರತಿವಾದಿಯೂ ಅವರ ಹೆಂಡತಿಯಾದ ಕಮಲಾಕ್ಷಿ ಆಲಿಯಾಸ್ ಕಸ್ತೂರಿ ಮತ್ತು ವಾದಿಯರಿಗೆ ತಿಳಿಸದೇ, ದಿನಾಂಕಃ 28.03.2018 ರಂದು ದಾವಾ ಪರಿಶಿಷ್ಟದ 1 ನೇ ಸ್ವತ್ತನ್ನು ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಮಾರಾಟ ಮಾಡಿರುತ್ತಾರೆ ಎಂಬುದನ್ನು ವಾದಿಯರು ರುಜುವಾತುಪಡಿಸುತ್ತಾರೆಯೇ?

3. ದಾವಾ ಪರಿಶಿಷ್ಟದ 1 ನೇ ಸ್ವತ್ತು 1 ನೇ ಪ್ರತಿವಾದಿಯೂ ತಾನು ಸ್ವಂತ ದುಡಿಮೆಯಿಂದ ಗಳಿಸಿದ್ದು, ಅದು ಸ್ವಯಾರ್ಜಿತ ಆಗಿರುತ್ತದೆ ಎಂಬುದನ್ನು 1 ನೇ ಪ್ರತಿವಾದಿ ರುಜುವಾತುಪಡಿಸುತ್ತಾರೆಯೇ?

4. 2 ನೇ ಪ್ರತಿವಾದಿಯೂ ದಾವಾ ಪರಿಶಿಷ್ಟದ 1 ನೇ ಸ್ವತ್ತನ್ನು 1 ನೇ ಪ್ರತಿವಾದಿಯಿಂದ ನೋಂದಾಯಿತ ಕ್ರಯ ಪತ್ರದ ಮುಖಾಂತರ ತಾನು ಕ್ರಯಕ್ಕೆ ತೆಗೆದುಕೊಂಡಿದ್ದು, ತಾನು ಸದರಿ ಸ್ವತ್ತಿನ ಮಾಲೀಕ ಮತ್ತು ಸ್ವಾಧೀನಾನುಭವದಾರ ಎಂಬುದನ್ನು ರುಜುವಾತುಪಡಿಸುತ್ತಾರೆಯೇ?

5. ವಾದಿಯರು ವಾದ ಪತ್ರದಲ್ಲಿ ಕೇಳಿದಂತೆ ಪರಿಹಾರ ಪಡೆಯಲು ಅರ್ಹರೇ?

6. ಯಾವ ಆದೇಶ ಅಥವಾ ಡಿಕ್ರಿ?

ದಿನಾಂಕಃ 17.12.2019.

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.